ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಇಲ್ಲ.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕ್ರೀಡಾಂಗಣಗಳು

899 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು?

ಆ) ತಾಲ್ಲೂಕು ಮಟ್ಟದಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು?

ಇ) ಹಾಗಿದ್ದಲ್ಲಿ ಇರುವ ಅವಶ್ಯಕತೆ ಎಷ್ಟು?

ಶ್ರೀ ಅಜಯ ಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಇಲ್ಲಿಯವರೆಗೆ 91 ಕ್ರೀಡಾಂಗಣಗಳನ್ನು ರಾಜ್ಯದಲ್ಲಿ ನಿರ್ಮಾಣ ಮಾಡಲು ಸರ್ಕಾರದಿಂದ ಆಡಳಿತಾತ್ಮಕ ಮಾಂಜೂರಾತಿಯನ್ನು ನೀಡಿದೆ - ವಿವರ ಈ ಕೆಳಕಂಡಂತೆ ಇದೆ :

1)	ಜಿಲ್ಲಾ ಮಟ್ಟದ ಕ್ರೀಡಾಂಗಣ	18
2)	ತಾಲ್ಲೂಕು ಮಟ್ಟದ ಕ್ರೀಡಾಂಗಣ	73

ಇಲ್ಲಿಯವರೆಗೆ 17 ಜಿಲ್ಲಾ ಮಟ್ಟದ ಕ್ರೀಡಾಂಗಣ ಪೂರ್ಣಗೊಂಡಿದ್ದು, 73 ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ ಪ್ರಗತಿಯಲ್ಲಿದೆ.

ಆ) 73 ತಾಲ್ಲೂಕು ಮಟ್ಟದ ಕ್ರೀಡಾಂಗಣಗಳು ನಿರ್ಮಾಣ ಪ್ರಗತಿಯಲ್ಲಿವೆ.

ಇ) ಇನ್ನು 84 ತಾಲ್ಲೂಕು ಮಟ್ಟ ಕ್ರೀಡಾಂಗಣಗಳ ಅವಶ್ಯಕತೆ ಇದೆ.

ಖಾಸಗಿ ಮೆಡಿಕಲ್ ಕಾಲೇಜುಗಳು ಸ್ವಂತ ಆಸ್ಪತ್ರೆಗಳನ್ನು ಹೊಂದಿರುವ ಬಗ್ಗೆ

901 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಲ್ಲಾ ಖಾಸಗೀ ಮೆಡಿಕಲ್ ಕಾಲೇಜುಗಳು ಅವರದೇ ಆದ ಆಸ್ಪತ್ರೆಗಳನ್ನು ಹೊಂದಿದೆಯೇ?

ಆ) ಇಲ್ಲವಾದರೆ ಅಂತಹ ಕಾಲೇಜುಗಳ ಮೇಲೆ ಕೈಗೊಂಡ ಕ್ರಮಗಳೇನು?

ಇ) ಈಗ ಯಾವ ಆಸ್ಪತ್ರೆಗಳನ್ನು ಯಾವ ಕಾಲೇಜು ಉಪಯೋಗಿಸುತ್ತಿವೆ.